# ಯೂದನ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಕಡೆಯ ಮಲ ತಮ್ಮ ಮತ್ತು ಯಾಕೋಬನ ಸಹೋದರ.

**ದಿನಾಂಕ:**

ಕ್ರಿ.ಶ. 68 ಮತ್ತು 80 ರ ಸಮಯದಲ್ಲಿ.

**ಧ್ಯೇಯಗಳು:**

ಸಭೆಯಲ್ಲಿದ್ದು ಯೇಸು ಕ್ರಿಸ್ತನ ಸತ್ಯವನ್ನು ನಿರಾಕರಿಸುವ ಮತ್ತು ತಮ್ಮ ಸ್ವಂತ ಸುಳ್ಳು ಸಿದ್ಧಾಂತಗಳನ್ನು ಬೋಧಿಸುವವರಿಗೆ ಯೂದನು ಬರೆಯುತ್ತಾ ಇದ್ದಾನೆ. ದೇವರಾತ್ಮನ ಪ್ರೇರಣೆಯಿಂದ ಅವನು ಅವರ ಬೋಧನೆ ಮತ್ತು ಜೀವನ ಶೈಲಿಯನ್ನು ಬಲವಾಗಿ ಖಂಡಿಸಿದ್ದಾನೆ. 3 ನೇ ವಚನದಲ್ಲಿ ಮುಖ್ಯ ಆಲೋಚನೆಯನ್ನು ನೋಡಬಹುದಾಗಿದೆ – “ಪೂರ್ಣಾಸಕ್ತಿಯಿಂದ ದೇವಜನರು ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದು”.

# 1

**1:1** ಯೂದ ಎಂದರೆ “ಸ್ತುತಿಗೆ ಪಾತ್ರನು”. ಹಳೆಯ ಒಡಂಬಡಿಕೆಯ ಯೆಹೂದ ಮತ್ತು ಹೊಸ ಒಡಂಬಡಿಕೆಯ ಯೂದ ಇಬ್ಬರೂ ಒಂದೇ ಆಗಿದ್ದಾರೆ. ಹೊಸ ಒಡಂಬಡಿಕೆಯಲ್ಲಿ ಯೂದ ಎಂಬ ಹೆಸರುಳ್ಳವರು ಅನೇಕರಿದ್ದಾರೆ. ಇವನು, ಕರ್ತನಾದ ಯೇಸು ಕ್ರಿಸ್ತನ ಮಲ ಸಹೋದರ ಎಂಬದು ದೃಢವಾಗಿದೆ (ಮತ್ತಾಯ 13:55; ಯೋಹಾನ 7:3). ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನಕ್ಕೂ ಮೊದಲು ಯೂದ ಆತನನ್ನು ನಂಬಿರಲಿಲ್ಲ, ಆದರೆ ಅದಾದ ನಂತರ ಅವನನ್ನು ಅಪೊ 1:14; 1 ಕೊರಿಂಥ 9:5 ರಲ್ಲಿ ವಿಶ್ವಾಸಿಗಳ ನಡುವೆ ನಾವು ನೋಡುತ್ತೇವೆ.

“*ದಾಸನು*”– ರೋಮಾ 1:1.

“*ಯಾಕೋಬ*”– ಯಾಕೋಬ 1:1.

“*ಪ್ರಿಯರು*”– ಅಪೊ 20:32; 26:18; ರೋಮಾ 15:16; 1 ಕೊರಿಂಥ 1:2; 6:11; ಇಬ್ರಿ 10:10,14.

“*ಕಾಯಲ್ಪಟ್ಟವರು*”– ಯೋಹಾನ 6:37-40; 10:27-28; 17:11-12; ರೋಮಾ 5:9-10; 8:28-30,35-39; 1 ಕೊರಿಂಥ 1:8-9; 1 ಪೇತ್ರ 1:5.

*“ಕರೆಯಲ್ಪಟ್ಟವರು”*– ರೋಮಾ 1:6-7; 8:28,30; 9:24; 1 ಕೊರಿಂಥ 1:9; ಗಲಾ 1:6,15; ಎಫೆ 1:18; ಫಿಲಿಪ್ಪಿ 3:14; 2 ಥೆಸ 2:14; 2 ತಿಮೊ 1:9; 1 ಪೇತ್ರ 2:9; 3:9; 5:10; 2 ಪೇತ್ರ 1:10. **2**

**1:2** *“ಕರುಣೆ”*– ರೋಮಾ 9:15-16; 11:32; 12:1; 15:9; ಎಫೆ 2:4; ತೀತ 3:5. ವಿಶ್ವಾಸಿಗಳು ತಮ್ಮ ಪಾಪ, ಮೂಡತನ ಮತ್ತು ಬಲಹೀನತೆಯಲ್ಲಿ ಅಸಹಾಯಕರಾಗಿದ್ದಾಗ ದೇವರು ತನ್ನ ಕರುಣೆಯಿಂದ ಅವರನ್ನು ರಕ್ಷಿಸಿದನು. ಅದು ಅಯೋಗ್ಯರಾಗಿದ್ದವರಿಗೆ ದಯೆ ಮತ್ತು ಕೃಪೆಯ ಕಾರ್ಯವಾಗಿತ್ತು. ಈಗ ದೇವರ ಕರುಣೆ ನಮಗೆ ಲಭ್ಯವಾಗುವದು ಮುಂದುವರೆದಿದೆ ಮತ್ತು ದೇವರ ಈ ಕರುಣೆಯು ಸಮಾಧಾನದ ಅಡಿಪಾಯವಾಗಿದೆ.

*“ಸಮಾಧಾನ”*– ರೋಮಾ 1:7. ಇದರ ಅರ್ಥವೇನೆಂದರೆ ಸಮಾಧಾನ ಮನಸ್ಸು ಮತ್ತು ಹೃದಯ ದೇವರೊಂದಿಗೆ ಸರಿಯಾದ ಸಂಬಂಧ ಹಾಗೂ ವಿಶ್ವಾಸಿಗಳ ನಡುವೆ ಸಾಮರಸ್ಯವಿರುವಾಗ ದೊರೆಯುತ್ತದೆ.

*“ಪ್ರೀತಿ”*– ದೈವೀಕ ಪ್ರೀತಿ (ಅಗಾಪೆ – ಯೋಹಾನ 13:34; ರೋಮಾ 5:5; 1 ಕೊರಿಂಥ 13:1; ಎಫೆ 3:17 ನೋಡಿರಿ). ಇದಕ್ಕೆ ಕಾರಣ ನಾವು ದೇವರ ಕರುಣೆ ಮತ್ತು ಸಮಾಧಾನವನ್ನು ಹೊಂದಿದ್ದೇವೆ. ಇದು ಎಲ್ಲಾ ಗುಣಗಳಲ್ಲಿ ಪ್ರಸಿದ್ಧವಾದದ್ದಾಗಿದೆ (1 ಕೊರಿಂಥ 13:13). ಪ್ರೀತಿಸ್ವರೂಪನಾಗಿರುವ ದೇವರೇ, ಇದರ ಮೂಲ (1 ಯೋಹಾನ 4:7-8). **3**

**1:3** *“ರಕ್ಷಣೆ”*– ರೋಮಾ 1:16 ರ ನೋಟ್ ನೋಡಿರಿ. ಯೂದನು ಮಹದಾದ ಮತ್ತು ಪ್ರಭಾವವಾದ ವಿಷಯದ ಬಗ್ಗೆ ಬರೆಯಬೇಕೆಂದಿದ್ದನು. ಆದರೆ ಅವುಗಳಷ್ಟು ಮೆಚ್ಚಿಕೆಯಲ್ಲದ ಬೇರೊಂದು ವಿಷಯದ ಬಗ್ಗೆ ಬರೆಯುವದು ಅವಶ್ಯವೆಂದು ತಿಳಿದುಕೊಂಡನು.

*“ಅವಶ್ಯವೆಂದು ತೋಚಿತು”*– ಸಭೆಯ ಅವಶ್ಯಕತೆ ಅದನ್ನು ಬೇಡುತ್ತದೆ ಮತ್ತು ಕ್ರೈಸ್ತೀಯ ಸಮುದಾಯದವರಿಗೆ ದೊಡ್ಡ ಅಪಾಯವು ಎದುರಾಗುವದಾಗಿತ್ತು. ದೇವರಾತ್ಮನು ಅವನಲ್ಲಿ ಕಾರ್ಯಮಾಡುತ್ತಾ ಇದ್ದನು ಮತ್ತು ಅವನನ್ನು ಪ್ರೋತ್ಸಾಹಪಡಿಸುತ್ತಾ ಇದ್ದನು.

*“ಎಚ್ಚರಿಸಿ ಬರೆಯುವದು”*– ಗ್ರೀಕ್ ಪದವು ರಣರಂಗದಲ್ಲಿ ಎದುರಾಗುವ ಹೋರಾಟವನ್ನು ಸೂಚಿಸುತ್ತದೆ, ವಿಶ್ವಾಸಿಗಳು ಈಗ ಹೋರಾಡುತ್ತಾ ಇದ್ದಾರೆ. ಎಫೆ 6:11-18; 1 ತಿಮೊ 6:12 ರೊಂದಿಗೆ ಹೋಲಿಸಿ ನೋಡಿರಿ. ಭೂಲೋಕದಲ್ಲಿ ಸಹಜವಾಗಿ ಮತ್ತು ಕ್ರೈಸ್ತೀಯ ಲೋಕದಲ್ಲಿ ದೇವರು ಪ್ರಕಟಿಸಿರುವ ಸತ್ಯದ ವಿಷಯದಲ್ಲಿ ಹೋರಾಟವು ನಡೆಯುತ್ತಾ ಇದೆ.

*“ನಂಬಿಕೆ”*– ಯೂದನ ಮಾತುಗಳ ಅರ್ಥ ಆಂತರ್ಯದಲ್ಲಾಗುವ ನಂಬಿಕೆಯ ಅನುಭವವಲ್ಲ ಬದಲಾಗಿ ದೇವರು ಯೇಸು ಕ್ರಿಸ್ತನ ಮೂಲಕ ಕೊಟ್ಟಿರುವ ಸತ್ಯದ ಆಕಾರವಾಗಿದೆ. ಆತನು

ಮತ್ತು ಆತನ ಅಪೊಸ್ತಲರು ನಾವು ಏನನ್ನು ನಂಬಬೇಕು ಹಾಗೂ ಹೇಗೆ ಜೀವಿಸಬೇಕು ಎಂದು ತಿಳಿಸಿದ್ದಾರೆ. ಅದುವೇ "ನಂಬಿಕೆಯಾಗಿದೆ". ಸರಿಯಾದ ಸಿದ್ಧಾಂತವನ್ನು ಅಭ್ಯಾಸಿಸುವದು ಮಾತ್ರವೇ ಸಾಲದು (ಆದರೆ ಇದುವೂ ಪ್ರಾಮುಖ್ಯವಾಗಿದೆ). ನಾವು ಆ ಸಿದ್ಧಾಂತಗಳಿಗನುಸಾರವಾಗಿಯೂ ಜೀವಿಸಬೇಕು (ಎಫೆ 4:1; ಕೊಲೊ 1:10; 1 ಥೆಸ 2:12). ಈ ಪತ್ರಿಕೆಯಲ್ಲಿ ಯೂದನ ಪ್ರಾಮುಖ್ಯತೆಯು ಸಿದ್ಧಾಂತದ ಮೇಲೆ ಮಾತ್ರವಲ್ಲ ಬದಲಾಗಿ ಸರಿಯಾದ ನಡವಳಿಕೆ ಮತ್ತು ಸರಿಯಾದ ಸಿದ್ಧಾಂತರದ ಮೇಲೆಯಾಗಿದೆ. ಅವನು ಎಚ್ಚರಿಕೆಯನ್ನು ಕೊಡುತ್ತಾ ಇರುವ ತಪ್ಪು ಸುಳ್ಳು ಬೋಧನೆಯಿಂದ ಎದುರಾಗುವ ಅಪರಿಶುದ್ಧವಾದ ಜೀವನವಾಗಿದೆ.

"*ಒಂದೇ ಸಾರಿ ಒಪ್ಪಿಸಲ್ಪಟ್ಟ*"– ದೇವರು ಯೇಸು ಕ್ರಿಸ್ತನು ಮತ್ತು ಆತನ ಅಪೊಸ್ತಲರ ಮೂಲಕ ಪ್ರಕಟಿಸಿರುವ "ನಂಬಿಕೆ" ಪರಿಪೂರ್ಣವಾಗಿದೆ. ಇದಕ್ಕೆ ಏನನ್ನೂ ಸೇರಿಸಬಾರದು, ಏನನ್ನೂ ತೆಗೆಯಬಾರದು. ಧರ್ಮೋ 4:2; ಜ್ಞಾನೋ 30:6; ಪ್ರಕ 22:18-19 ರೊಂದಿಗೆ ಹೋಲಿಸಿ ನೋಡಿರಿ. ಯಾವ ಮೂಲಕವಾದರೂ, ಯಾವ ಸ್ಥಳದಲ್ಲಾದರೂ "ನಂಬಿಕೆಗೆ" ಸೇರಿಸುವಂಥ ಯಾವ ಸತ್ಯದ ಕುರಿತೂ ದೇವರು ಹೆಚ್ಚಿನ ಪ್ರಕಟನೆಯನ್ನು ನೀಡಿಲ್ಲ. ಹೊಸದಾದ ಯಾವುದೇ ಸಿದ್ಧಾಂತವಾದರೂ ಖಂಡಿತವಾಗಿಯೂ ಸುಳ್ಳಾಗಿದೆ. ದೇವರು ವಿಶ್ವಾಸಿಗಳಿಗೆ ಸತ್ಯವನ್ನು ಕೊಟ್ಟಿರುವದು ಅದಕ್ಕೆ ವಿರುದ್ಧವಾಗಿ ಆಕ್ರಮಣ ಎದುರಾಗುವಾಗ ಅದನ್ನು ಕಾಪಾಡಿಕೊಳ್ಳಬೇಕು, ಅಭ್ಯಾಸ ಮಾಡಬೇಕು ಮತ್ತು ರಕ್ಷಿಸಬೇಕು. 1 ಕೊರಿಂಥ 4:1; 1 ಥೆಸ 2:4; 1 ತಿಮೊ 1:11; 6:20; 2 ತಿಮೊ 1:14.

"*ದೇವಜನರು*"– ರೋಮಾ 1:7. **4**

**1:4** ಇಲ್ಲಿ ಯೂದನು ಕಂಡ ಅಪಾಯವನ್ನು ನೋಡುತ್ತೇವೆ. ಕ್ರೈಸ್ತರ ನಡುವೆ ಘೋರವಾದ ಸುಳ್ಳು ಬೋಧನೆಯನ್ನು ಪರಿಚಯಪಡಿಸಲಾಗಿತ್ತು. ಸುಳ್ಳು ಬೋಧನೆ ಏನೆಂದರೆ: ರಕ್ಷಣೆಯು ಯಾವುದೇ ಒಳ್ಳೆಯ ಕಾರ್ಯಗಳ ಮೇಲೆ ಆಧಾರವಾಗದೆ ಸಂಪೂರ್ಣವಾಗಿ ದೇವರ ಕೃಪೆಯ ಮೇಲೆಯೇ ಆಧಾರವಾಗಿರುವದರಿಂದ, ಕ್ರೈಸ್ತರು ತಮಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಜೀವಿಸಬಹುದು, ಅವರು ಹೇಗೇ ಜೀವಿಸಿದರು, ಏನೇ ಮಾಡಿದರೂ, ಕೃಪೆಯು ಅವರನ್ನು ಕ್ಷಮಿಸುತ್ತದೆ. ರೋಮಾ 6:1 ರೊಂದಿಗೆ ಹೋಲಿಸಿ ನೋಡಿರಿ. ಆ ಸುಳ್ಳು ಬೋಧನೆ ಇಂದಿಗೂ ಅಸ್ತಿತ್ವದಲ್ಲಿದೆ.

"*ಕಳ್ಳತನದಿಂದ*"– 2 ಪೇತ್ರ 2:1. ಸಹಜವಾಗಿ ಸುಳ್ಳು ಬೋಧಕರು ನೇರವಾಗಿ ಮತ್ತು ಪ್ರಾಮಾಣಿಕವಾಗಿ ಬರುವದಿಲ್ಲ. ಅವರು ಕಳ್ಳರ ಹಾಗೆ ಬರುತ್ತಾರೆ. ಅವರು ಸತ್ಯದೊಂದಿಗೆ ತಮ್ಮ ತಪ್ಪುಗಳನ್ನು ಸೇರಿಸಿ ಅದನ್ನು ಹೆಚ್ಚು ವಂಚನೆಯುಳ್ಳದ್ದಾಗಿ ಮಾಡುತ್ತಾರೆ.

"*ಭಕ್ತಿಹೀನತೆ*"– ಅವರು ನಾವು ಕ್ರೈಸ್ತರು ಮತ್ತು ಯೇಸು ಕ್ರಿಸ್ತನ ಹಿಂಬಾಲಕರು ಎಂಬದಾಗಿ ಹೇಳುತ್ತಾರೆ ಆದರೆ ಅವರ ನಡವಳಿಕೆಗಳು ವಿರುದ್ಧವಾಗಿರುತ್ತವೆ.

*“ಕೃಪೆಯನ್ನು ನಾಚಿಕೆಗೆಟ್ಟ ಕೃತ್ಯ ಮಾಡಲು ಉಪಯೋಗಿಸುತ್ತಾರೆ”*– ಕೊರಿಂಥದಲ್ಲಿ ಕ್ರೈಸ್ತರೆಂದು ಹೇಳಿಕೊಳ್ಳುತ್ತಾ ಇದ್ದವರಲ್ಲಿ ಕೆಲವರು ಇಂಥವರೇ ಆಗಿದ್ದರು (1 ಕೊರಿಂಥ 5:1-2; 6:9,12). ತೀತ 2:11-14 ರಲ್ಲಿ ದೇವರ ಕೃಪೆ ನಿಜವಾಗಿಯೂ ಏನನ್ನು ಕಲಿಸುತ್ತದೆ ಎಂದು ನೋಡಿರಿ. ಹಾಗೆಯೇ ಎಫೆ 4:19-24 ನೋಡಿರಿ.

*“ಅಲ್ಲಗಳೆಯುವದು”*– 2 ಪೇತ್ರ 2:1. ಅಲ್ಲಗಳೆಯುವಿಕೆಯನ್ನು ಕ್ರಿಯೆಗಳ ಮೂಲಕ ಹಾಗೆಯೇ ಮಾತುಗಳ ಮೂಲಕವೂ ಮಾಡಬಹುದು. ಇವರು ತಮ್ಮ ಮೇಲೆ ಯೇಸು ಕ್ರಿಸ್ತನ ಒಡೆತನವನ್ನು ಅಲ್ಲಗಳೆದರು, ಆದರೂ ನಾವು ಆತನೇ ಕರ್ತನೆಂದು ನಂಬುತ್ತೇವೆ ಎಂದು ಹೇಳುವವರಾಗಿದ್ದರು.

*“ಒಡೆಯನು”*– ಇಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಪದ “ಡೆಸ್ಪೊಟಸ್” ಎಂಬದಾಗಿದ್ದು ಅದರ ಅರ್ಥ ಯಜಮಾನನು ಮತ್ತು ಸಂಪೂರ್ಣ ಅಧಿಕಾರದ ಬಾಧ್ಯಸ್ಥನು ಎಂಬದಾಗಿದೆ. ಲೂಕ 2:28-29 ಮತ್ತು ಅಪೊ 4:24 ರಲ್ಲಿ ದೇವರಿಗೆ ಈ ಶೀರ್ಷಿಕೆಯನ್ನು ಕೊಡಲಾಗಿದೆ. ಯೇಸು ಕ್ರಿಸ್ತನು ನಮ್ಮ “ಏಕೈಕ” ಸಾರ್ವ ಭೌಮನಾಗಿದ್ದಾನೆ ಅಂದರೆ ಯೇಸು ಕ್ರಿಸ್ತನೇ ದೇವರಾಗಿದ್ದಾನೆ ಎಂಬದನ್ನು ಈ ವಾಕ್ಯದ ಕಡೆಯ ಪದಗಳು ಸ್ಪಷ್ಟಪಡಿಸುತ್ತವೆ. ಮೇಲೆ ಕೊಡಲಾಗಿರುವ ಭಾಷಾಂತರವು ಇದು ನಿಖರವಾಗಿ ವ್ಯಕ್ತಪಡಿಸುತ್ತದೆ.

*“ನಮ್ಮ ದೇವರು ಮತ್ತು ಕರ್ತನು”*– 2 ಪೇತ್ರ 1:1 ರೊಂದಿಗೆ ಹೋಲಿಸಿ ನೋಡಿರಿ. **5**

**1:5** *“ಜ್ಞಾಪಕ”*– 2 ಪೇತ್ರ 1:12-15.

*“ಕರ್ತನು”*– ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನಿಗೆ ಎಲ್ಲಾ ಕಡೆಗಳಲ್ಲಿಯೂ ಈ ಶೀರ್ಷಿಕೆ (ಗ್ರೀಕ್-ಕುರಿಯೋಸ್) ಕೊಡಲಾಗಿದೆ. ಮತ್ತು ಯೂದನು ಹಿಂದಿನ ವಚನದಲ್ಲಿ ಆತನನ್ನು ಕರ್ತನು ಎಂದು ಕರೆದಿದ್ದಾನೆ. ಇದರಲ್ಲಿ ಅವನು ಆತನು ತನ್ನ ಜನರನ್ನು ಐಗುಪ್ತದಿಂದ ಬಿಡಿಸಿದನು ಎಂದು ಹೇಳಿದ್ದಾನೆ. ಚಾರಿತ್ರಿಕ ದಾಖಲೆಯಲ್ಲಿ ಯೆಹೋವನು ಜನರನ್ನು ಬಿಡಿಸಿದನು. ವಿಮೋ 7:12; 18:10; 19:2. ಇದರ ಅರ್ಥ ಯೂದನು ಯೇಸು ಕ್ರಿಸ್ತನು ಮತ್ತು ಯೆಹೋವನು ಇಬ್ಬರೂ ಒಬ್ಬನೇ ಎಂದು ಹೇಳುತ್ತಾ ಇದ್ದಾನೆ. ಲೂಕ 2:11 ರಲ್ಲಿ “ಕರ್ತನ” ಕುರಿತಾದ ವಾಕ್ಯಗಳು ಮತ್ತು ನೋಟ್ ನೋಡಿರಿ.

*“ನಾಶಮಾಡಿದನು”*– ಇಬ್ರಿ 3:16-19; 1 ಕೊರಿಂಥ 10:1-6; ಸಂಖ್ಯಾ 14:11,22,23; ಕೀರ್ತನೆ 78:22,32,33; 106:15,18,24-26,29. **6**

**1:6** *“ಮೊದಲ ಸ್ಥಾನ”*– 2 ಪೇತ್ರ 2:4.

*“ವಾಸಸ್ಥಳ”*– ಪರಲೋಕ.

*“ದಿನ”*– ಅಂತಿಮ ನ್ಯಾಯತೀರ್ಪಿನ ದಿನ (ಪ್ರಕ 20:11-15). **7**

**1:7** *“ಅವರಂತೆ ನಡೆದುಕೊಂಡರು”*– ಅಂದರೆ ಇಲ್ಲಿ ಸೊದೊಮ್ ಪಟ್ಟಣದ ಜನರ ಪಾಪಗಳನ್ನು ತಿಳಿಸಲಾಗಿದೆ ಮತ್ತು 6 ನೇ ವಚನದಲ್ಲಿ ತಿಳಿಸಲಾಗಿರುವ ದೇವದೂತರ ಪಾಪ

ಒಂದೆಯಾಗಿದೆ. ಆದಿ 6:1-4 ರೊಂದಿಗೆ ಹೋಲಿಸಿ ನೋಡಿರಿ.

*"ಸ್ವಭಾವಕ್ಕೆ ವಿರುದ್ಧವಾದದ್ದು"*– ಆದಿ 19ನೇ ಅಧ್ಯಾಯ.

*"ಬೆಂಕಿ"*– 2 ಪೇತ್ರ 2:6; ಮಲಾಕಿ 4:1; ಮತ್ತಾಯ 3:10,12; 25:41. **8**

**1:8** *"ಸ್ವಪ್ನಾವಸ್ಥೆಯಲ್ಲಿರುವವರು"*– ಅವರು ವಾಸ್ತವದ ಸಂಪರ್ಕದಲ್ಲಿರುವವರಾಗಿದೆ ಕಣ್ಣಿನಾಸೆಗೆ ಒಳಗಾದವರಂತೆ ನಡೆದುಕೊಳ್ಳುತ್ತಾರೆ. ಸ್ವಪ್ನಗಳನ್ನು ಕಾಣುವವರು ಎಂಬ ಪದ ಇವರು ತಮ್ಮ ದರ್ಶನಗಳಲ್ಲಿ ದೇವರ ಪ್ರಕಟನೆಗಳನ್ನು ಹೊಂದುವವರು ಎಂಬದಾಗಿ ಹೇಳಿಕೊಳ್ಳುತ್ತಾ ಇದ್ದರು (ಧರ್ಮೋ 13:1-3; ಯೆರೆ 23:25-26).

*"ಶರೀರವನ್ನು ಮಲಿನ ಮಾಡಿಕೊಳ್ಳುತ್ತಾರೆ"*– ರೋಮಾ 1:24; 1 ಕೊರಿಂಥ 6:18.

*"ಪ್ರಭುತ್ವವನ್ನು ಅಸಡ್ಡೆ ಮಾಡುತ್ತಾರೆ, ಮಹಾಪದವಿಯವರನ್ನು ದೂಷಿಸುತ್ತಾರೆ"*– 2 ಪೇತ್ರ 2:10. **9**

**1:9** *"ಮೀಕಾಯೇಲನು"*– ದಾನಿ 10:13,21; 12:1; ಪ್ರಕ 12:7. ಪ್ರಧಾನ ದೇವದೂತನು ಉನ್ನತ ದರ್ಜೆಯ ದೇವದೂತನಾಗಿದ್ದಾನೆ.

*"ಸೈತಾನನು"*– ಮತ್ತಾಯ 4:1 ರ ನೋಟ್ ನೋಡಿರಿ.

*"ಮೋಶೆಯ ಶವದ ವಿಷಯದಲ್ಲಿ"*– ಸತ್ಯವೇದದಲ್ಲಿ ಈ ಘಟನೆಯ ದಾಖಲೆಯಿಲ್ಲ. ಕಾದಾಟದ ಕಾರಣ ನಮಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳುವದು ನಮಗೆ ಅವಶ್ಯವೂ ಇಲ್ಲ – ಧರ್ಮೋ 29:29.

*"ಕರ್ತನು ನಿನ್ನನ್ನು ಖಂಡಿಸಲಿ"*– ಮೀಕಾಯೇಲನು ಸೈತಾನನ ಸಂಗಡ ಮಾತನಾಡುವಾಗಲೂ ಎಷ್ಟು ಎಚ್ಚರಿಕೆಯುಳ್ಳವನಾಗಿದ್ದಾನೆ ಗಮನಿಸಿರಿ. ಅವನು ಇತರರ ವಿಷಯದಲ್ಲಿ ತೀರ್ಪು ಮಾಡುವದು ಮತ್ತು ಇತರರನ್ನು ದಂಡಿಸುವದನ್ನು ದೇವರ ಹಸ್ತಗಳಿಗೆ ಒಪ್ಪಿಸಿದನು, ನಾವೂ ಹೀಗೆಯೇ ಮಾಡಬೇಕು. **10**

**1:10** *"ತಮಗೆ ಗೊತ್ತಿಲ್ಲದವುಗಳನ್ನು ದೂಷಿಸುತ್ತಾರೆ"*– 2 ಪೇತ್ರ 2:12. ಇದು ಅವರ ಅಹಂಕಾರ ಮತ್ತು ದುಷ್ಟತನವನ್ನು ತೋರಿಸುತ್ತದೆ.

*"ಸ್ವಾಭಾವಿಕವಾಗಿ ಅವರಿಗೆ ತಿಳಿದಿರುವ ಸಂಗತಿಗಳು"*– ಅವರಿಗೆ ಆತ್ಮೀಕ ವಿಷಯಗಳ ಬಗ್ಗೆ ಏನೂ ಗೊತ್ತಿಲ್ಲ, ಕೇವಲ ಶಾರೀರಿಕ ವಿಷಯಗಳು ಮಾತ್ರವೇ ಗೊತ್ತಿವೆ. **11**

**1:11** *"ಗತಿ"*– ಯೆಶಾಯ 3:11; ಮತ್ತಾಯ 18:7.

*"ಕಾಯಿನನು"*– ಆದಿ 4:1-12 ನೋಡಿರಿ. ಯಜ್ಞದ ವಿಷಯದಲ್ಲಿ ದೇವರ ಸೂಚನೆಯನ್ನು ನಿರಾಕರಿಸುವದು ಮತ್ತು ದೇವರು ಅಂಗೀಕರಿಸಿಕೊಳ್ಳುವವರನ್ನು ದ್ವೇಷಿಸುವದು ಕಾಯಿನನ ಸ್ವಭಾವವಾಗಿದೆ. ಹಾಗೆಯೇ ಇಬ್ರಿ 11:4; 1 ಯೋಹಾನ 3:12 ನೋಡಿರಿ.

*"ಬಿಳಾಮನ ಭ್ರಾಂತಿ"*– 2 ಪೇತ್ರ 2:12 ನೋಡಿರಿ.

*"ಕೋರಹನ ಎದುರು ಮಾತನಾಡುವಿಕೆ"*– ಅರಣ್ಯಕಾಂಡ 16. ದೇವಭಕ್ತಿಯಿಲ್ಲದ ಈ

ಜನರು ದೇವರಿಗೆ ವಿರುದ್ಧವಾಗಿ ತಿರುಗಿಕೊಳ್ಳುವ ಮೂಲಕ ಕೋರಹನಂತೆ ತಮ್ಮ ಮೇಲೆ ತಾವೇ ನಾಶನವನ್ನು ಬರಮಾಡಿಕೊಳ್ಳುತ್ತಾರೆ. ದೇವಭಕ್ತಿಯಿಲ್ಲದ ಈ ಜನರ ಹೃದಯದಲ್ಲಿ ಸತ್ಯದ ಕುರಿತು ದ್ವೇಷ, ಮತ್ತು ಇದನ್ನು ಅಭ್ಯಾಸ ಮಾಡುವವರು, ದ್ರಾವಶೆಗಾಗಿ ಏನು ಬೇಕಾದರೂ ಮಾಡುತ್ತಾರೆ ಹಾಗೂ ದೇವರಿಗೆ ವಿರುದ್ಧವಾಗಿ ಎದುರುಬೀಳುತ್ತಾರೆ ಎಂಬ ಮೂರು ವಿಷಯಗಳನ್ನು ಈ ವಚನವು ತಿಳಿಸುತ್ತದೆ. **12**

**1:12** *"ಪ್ರೇಮಭೋಜನಗಳು"*– 1 ಕೊರಿಂಥ 11:20-22 ರ ನೋಟ್ ನೋಡಿರಿ.

*"ಸ್ವಂತ ಹೊಟ್ಟೆಯನ್ನೇ ನೋಡಿಕೊಳ್ಳುತ್ತಾರೆ"*– ದುರಾಸೆ, ಸ್ವಾರ್ಥ ಮತ್ತು ಇತರರ ವಿಷಯದಲ್ಲಿ ಯಾವುದೇ ರೀತಿಯ ಕಾಳಜಿಯಿಲ್ಲದೆ ಇರುವಂಥದ್ದು ಅವರು ಮಾಡುವ ಕಾರ್ಯಗಳ ಪ್ರಾಮುಖ್ಯತೆಯಾಗಿರುತ್ತದೆ. ಯೆಹೆಜ್ಕೇಲ 34:1-10; ಯೆರೆ 10:21; 12:10; 23:1 ರೊಂದಿಗೆ ಹೋಲಿಸಿ ನೋಡಿರಿ.

*"ನಿರ್ಭಯವಾಗಿ"*– ಅವರ ಮನಸ್ಸಾಕ್ಷಿ ಅವರನ್ನು ಬಾಧಿಸುವದಿಲ್ಲ, ದೇವರ ಎಚ್ಚರಿಕೆಗಳಿಗೆ ಅವರು ಬೆಲೆಯೇ ಕೊಡುವದಿಲ್ಲ. 1 ತಿಮೊ 4:2 ರೊಂದಿಗೆ ಹೋಲಿಸಿ ನೋಡಿರಿ.

*"ನೀರಿಲ್ಲದ"*– ಮಳೆ ಸುರಿಸುವ ಭರವಸೆಯನ್ನು ಕೊಡುವಂಥ ಮೋಡಗಳು ಬಹುತೇಕ ನಿರಾಸೆಗೊಳಿಸುತ್ತವೆ (ಜ್ಞಾನೋ 25:14).

*"ಹೊಡಿಸಿಕೊಂಡು ಹೋಗುವ"*– 2 ಪೇತ್ರ 2:17.

*"ಹಣ್ಣುಬಿಡದ"*– ಒಳ್ಳೆಯ ಫಲಗಳು ಇರುವದಿಲ್ಲ (ಅವರಿಂದ ಬೇಕಾದಷ್ಟು ಕೆಟ್ಟ ಫಲಗಳು ಸುಗುತ್ತವೆ). ಮತ್ತಾಯ 21:18-19; ಲೂಕ 13:6-7 ರೊಂದಿಗೆ ಹೋಲಿಸಿ ನೋಡಿರಿ.

*"ಒಣಗಿಹೋಗುವದು"*– ಪಾಪ ಮತ್ತು ಅಪರಾಧಗಳಲ್ಲಿ ಸತ್ತು ಹೋಗಿದ್ದಾರೆ (ಎಫೆ 2:1), ಅವರ ಜೀವನ ಶೈಲಿಯು ಅವರಿಗಾಗುವ ಮರಣವನ್ನು ದೃಢಪಡಿಸುತ್ತದೆ (1 ತಿಮೊ 5:6). ಅವರು ಆತ್ಮೀಕವಾಗಿ ಮೃತಪಡುತ್ತಾರೆ ಮತ್ತು ತಾವು ತಿರಸ್ಕರಿಸಿರುವ ಸತ್ಯದ ಪಾಲಿಗೆ ಸತ್ತವರಾಗಿರುತ್ತಾರೆ. ಮತ್ತು ಎರಡನೆಯ ಮರಣವನ್ನು ಎದುರುನೋಡುವವರಾಗಿದ್ದಾರೆ (ಪ್ರಕ 20:14). ಅವರು ಅಸ್ತಿತ್ವಕ್ಕೆ ಬಂದ ಕೂಡಲೇ ತಮ್ಮ ಮೇಲೆ ಅದನ್ನು ಬರಮಾಡಿಕೊಂಡಿದ್ದಾರೆ ಎಂದು ಯೂದನು ಸೂಚಿಸುವವನಾಗಿದ್ದಾನೆ. ತಮ್ಮ ಅಹಂಕಾರ, ಅಪನಂಬಿಕೆ ಮತ್ತು ಎದುರುಬೀಳುವಿಕೆಯಿಂದ ಯೇಸು ಕ್ರಿಸ್ತನಲ್ಲಿ ದೊರೆಯುವ ನಿತ್ಯಜೀವಕ್ಕೆ ತಮ್ಮನ್ನು ತಾವೇ ಅಪಾತ್ರರನ್ನಾಗಿ ಮಾಡಿಕೊಳ್ಳುತ್ತಾರೆ. ಅವರು ದೇವರಿಂದ ನೆಡಲ್ಪಡದ ಮರಗಳ ಹಾಗೆ ಇರುತ್ತಾರೆ, ಆದ್ದರಿಂದ ಅವರಲ್ಲಿ ಆತ್ಮೀಕ ಜೀವನ ಇರುವದಿಲ್ಲ; ಮತ್ತು ಅವರು ಬೇರು ಸಹಿತ ಕಿತ್ತುಹಾಕಲ್ಪಡುವದರಿಂದ ಆತ್ಮೀಕ ಜೀವಿತದ ಯಾವ ನಿರೀಕ್ಷೆಯು ಅವರಿಗಿರುವದಿಲ್ಲ.

*"ಬೇರು ಸಹಿತ ಕಿತ್ತುಬಿದ್ದ ಮರಗಳು"*– ಮತ್ತಾಯ 15:13 ನೋಡಿರಿ. ದೇವರು ಇವರನ್ನು

ನೆಟ್ಟಿಲ್ಲ. ತಮ್ಮ ಜೀವಿತದಲ್ಲಿ ಒಳ್ಳೆಯ ಫಲಗಳನ್ನು ಕೊಡುವ ಯಾವುದರೊಂದಿಗೂ ಇವರಿಗೆ ಸಂಪರ್ಕ ಇರುವದಿಲ್ಲ. ಅವರು ನಿಜವಾದ ವಿಶ್ವಾಸಿಗಳು ಹೇಗಿರಬೇಕೋ ಅದಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತಾರೆ ಮತ್ತು ತಕ್ಕ ಮಟ್ಟಿಗೆ ಮಾತ್ರವೇ ಇರುತ್ತಾರೆ – ಎಫೆ 3:17; ಕೊಲೊ 2:7. **13**

**1:13** *"ಹುಚ್ಚು ತೆರೆಗಳು"*– ತಮ್ಮ ಹುಚ್ಚು ಬಯಕೆಗಳಿಂದ ವಿಶ್ರಾಂತಿಯಿಲ್ಲದೆ ಭೋರ್ಗರೆಯುವದು. ಯೆಶಾಯ 57:20-21 ರೊಂದಿಗೆ ಹೋಲಿಸಿ ನೋಡಿರಿ.

*"ಸ್ವಂತ ಅವಮಾನವೆಂಬ ನೊರೆಯನ್ನು ಕಾರುವ"*– ಅವರ ಹೃದಯದೊಳಗಿರುವ ಪಾಪವು ಕೆಟ್ಟ ಕ್ರಿಯೆಗಳ ಮೂಲಕ ಹೊರಬರುತ್ತದೆ.

*"ಅಲೆಯುವ ನಕ್ಷತ್ರಗಳು"*– ಯೇಸು ಕ್ರಿಸ್ತನ ಸುತ್ತಲು ಅವರಿಗೆ ನಿರ್ದಿಷ್ಟವಾದ ಸ್ಥಿರತೆಯಿರುವದಿಲ್ಲ ಮತ್ತು ಕ್ರೈಸ್ತರಿಗೆ ನೇಮಿಸಲಾಗಿರುವ ಗುರಿಯ ಕಡೆಗೆ ಅವರು ಸಾಗುವದಿಲ್ಲ (ಫಿಲಿಪ್ಪಿ 3:14).

*"ಕಾರ್ಗತ್ತಲೆ"*– 2 ಪೇತ್ರ 2:17; ಫಿಲಿಪ್ಪಿ 2:15; ದಾನಿ 12:3 ರೊಂದಿಗೆ ಹೋಲಿಸಿ ನೋಡಿರಿ. **14-15**

**1:14-15** ಆದಿ 5:18,21-24. ಈ ಹೇಳಿಕೆ ಸತ್ಯವೇದದಲ್ಲಿ ಇಲ್ಲ. ಪವಿತ್ರಾತ್ಮನು ಯೂದನನ್ನು ಪ್ರೇರೇಪಿಸಿರಿ ಸಾವಿರಾರು ವರ್ಷಗಳ ಮುಂಚಿತವಾಗಿ ಹನೋಕನು ನುಡಿದ ಪ್ರವಾದನೆಯನ್ನು ತಿಳಿಸಿದನು. ಯೂದನನ್ನು ಬಿಟ್ಟರೆ ಬೇರೆ ಯಾರೂ ಹನೋಕನು ಪ್ರವಾದಿ ಎಂದು ಹೇಳಿಲ್ಲ. ಹನೋಕನ ಕಾಲದಲ್ಲಿ ಭಕ್ತಿಯಿಲ್ಲದಿರುವಿಕೆಯು ಸಹಜವಾಗಿತ್ತು, ಬಹುತೇಕ ಈಗಲೂ ಅದೇ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಅವನು ಅದನ್ನು ಬಹಳವಾಗಿ ಖಂಡಿಸಿದ್ದಾನೆ. **14**

**1:14** *"ಆ ಜನರು"*– ಹನೋಕನ ಪ್ರವಾದನೆಯು ಆ ಕಾಲದಲ್ಲಿದ್ದ ಜನರಿಗಾಗಿ ಆಗಿತ್ತು. **15**

**1:15** *"ನ್ಯಾಯತೀರಿಸುವದಕ್ಕೆ"*– ಅಪೊ 17:31. **16**

**1:16** ಈ ವಚನವು ದೇವರಲ್ಲಿ ಭಕ್ತಿಯಿಲ್ಲದ ಜನರಲ್ಲಿ ಇರುವಂಥ ಐದು ಗುಣಗಳನ್ನು ತಿಳಿಸುತ್ತದೆ.

*"ಲಾಭಕ್ಕಾಗಿ ಗುಣಗುಟ್ಟುವವರು"*– ಅವರು ಯಾವುದರಲ್ಲಿಯೂ ಪ್ರಾಮಾಣಿಕರು ಮತ್ತು ಯಥಾರ್ಥರು ಆಗಿರುವದಿಲ್ಲ. ತಾವು ಏನು ಕೇಳಿಸಿಕೊಳ್ಳಬೇಕೆಂದು ಬಯಸುತ್ತಾರೋ ಅದನ್ನೇ ಅವರು ಇತರರಿಗೆ ಹೇಳುತ್ತಾರೆ. ಅವರ ಗುರಿ ಲಾಭ ಅಥವಾ ಪ್ರಯೋಜನ ಪಡೆದುಕೊಳ್ಳುವದೇ ಆಗಿರುತ್ತದೆ. ನಾವು ಇದೇ ಕಾರ್ಯವನ್ನು ಇಂದು ಎಲ್ಲಾ ಕಡೆಗಳಲ್ಲಿಯೂ ನೋಡುತ್ತಾ ಇದ್ದೇವೆ ಅಲ್ಲವೇ? ಗುಣಗುಟ್ಟುವಿಕೆಯ ವಿಷಯದಲ್ಲಿ ತಿಳಿಯಲು ಯೋಬ 32:21-22; ಕೀರ್ತನೆ 12:2-3; ಜ್ಞಾನೋ 26:28; 28:23; 29:5; ರೋಮಾ 16:18; 1 ಥೆಸ 2:5. **17**

**1:17** *"ಜ್ಞಾಪಕ ಮಾಡಿಕೊಳ್ಳಿರಿ"*– ವ 5; 2 ಪೇತ್ರ 1:12-15. **18**

**1:18** 2 ಪೇತ್ರ 3:3  ರೊಂದಿಗೆ ಹೋಲಿಸಿ ನೋಡಿರಿ. **19**

**1:19** *"ದೇವರಾತ್ಮವಿಲ್ಲದವರು"*– ಮತ್ತೊಮ್ಮೆ ಆತನು ಹೇಳುವದೇನೆಂದರೆ ಕ್ರೈಸ್ತರೆಂದು ಹೇಳಿಕೊಳ್ಳುವ ಇವರು ಕ್ರೈಸ್ತರೇ ಅಲ್ಲ. ರೋಮಾ 8:9. ಸಭೆಗಳಲ್ಲಿರುವವರೂ ಸೇರಿ ಎಲ್ಲರೂ ದೇವರಾತ್ಮವುಳ್ಳವರಾಗಿರುವದಿಲ್ಲ ಎಂಬದನ್ನು ಗಮನಿಸಿರಿ. ಯೋಹಾನ 14:17; ರೋಮಾ 8:9,16; ಎಫೆ 4:18 ನೋಡಿರಿ. **20**

**1:20** ಭ್ರಷ್ಟತೆ ಮತ್ತು ಭ್ರಷ್ಟರಿಂದ ದೂರ ಇರುವದು ಹೇಗೆ ಎಂಬದನ್ನು ಯೂದನು ವಿಶ್ವಾಸಿಗಳಿಗೆ ಈಗ ತೋರಿಸುತ್ತಾ ಇದ್ದಾನೆ.

*"ನಿಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಿರಿ"*– ಅಪೊ 20:32; ರೋಮಾ 15:2; ಎಫೆ 4:12-13; 1 ಥೆಸ 5:11 – ದೇವರ ವಾಕ್ಯದ ಅಧ್ಯಯನ ಮತ್ತು ಸತ್ಯವನ್ನು ಅಭ್ಯಾಸ ಮಾಡುವ ಮೂಲಕ ನಮ್ಮನ್ನು ನಾವು ಅಭಿವೃದ್ಧಿಪಡಿಸಿಕೊಳ್ಳಬಹುದು. ಈ ಕಾರ್ಯಗಳನ್ನು ಮಾಡುವದು ಪ್ರತಿಯೊಬ್ಬ ವಿಶ್ವಾಸಿಯ ಜವಾಬ್ದಾರಿಕೆಯಾಗಿದೆ.

*"ಪವಿತ್ರಾತ್ಮಪ್ರೇರಿತರಾಗಿ ಪ್ರಾರ್ಥನೆ ಮಾಡುವದು"*– ಎಫೆ 6:18. **21**

**1:21** ಯೇಸು ಕ್ರಿಸ್ತನು ವಿಶ್ವಾಸಿಗಳನ್ನು ರಕ್ಷಣೆಯ ಸ್ಥಿತಿಯಲ್ಲಿ ಕಾಪಾಡುತ್ತಾನೆ (ವ 1). ವಿಶ್ವಾಸಿಗಳು ತಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಬೇಕು. ಆತನ ವಾಕ್ಯಗಳಿಗೆ ವಿಧೇಯರಾಗಿ ಮಾತ್ರವೇ ಇದನ್ನು ಮಾಡಲು ಸಾಧ್ಯ – ಯೋಹಾನ 14:21,23; 15:9-10.

*"ಕರುಣೆ"*– ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ವ್ಯಕ್ತಪಡಿಸುವ ಸಲುವಾಗಿ ನಾವು ಎಷ್ಟು ವಿಧೇಯರಾಗುತ್ತೇವೆ ಎಂಬದು ಪ್ರಾಮುಖ್ಯವಲ್ಲ, ಮುಖ್ಯ ವಿಷಯವೇನೆಂದರೆ ನಮ್ಮ ರಕ್ಷಣೆಯು ಪ್ರಾರಂಭದಿಂದ ಕೊನೆಯ ತನಕ ಆತನ ಕರುಣೆಯಾಗಿದೆ.

*"ನಿತ್ಯಜೀವ"*– ಈಗಾಗಲೇ ವಿಶ್ವಾಸಿಗಳು ಹೊಂದಿರುವದರೊಳಗೆ ಅಂತಿಮವಾಗಿ ಪ್ರವೇಶಿಸುವದು (ಯೋಹಾನ 5:24; ತೀತ 1:2; 1 ಪೇತ್ರ 1:5). **22**

**1:22** ಅವರ ವಿಷಯದಲ್ಲಿ ಕಠಿಣರು ಮತ್ತು ಕರುಣೆಯಿಲ್ಲದವರಾಗಿ ನಡೆದುಕೊಳ್ಳಬೇಡಿರಿ. ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಿರಿ ಮತ್ತು ನಂಬಿಕೆಯ ಮಾರ್ಗಕ್ಕೆ ಬರಲು ಅವರಿಗೆ ಸಹಾಯ ಮಾಡಿರಿ. **23**

**1:23** *"ಇತರರು"*– ಜನರ ಪರಿಸ್ಥಿತಿಗಳನ್ನು ಗುರುತಿಸಿಕೊಳ್ಳಲು ನಾವು ಸಮರ್ಥರಾಗಿರಬೇಕು ಮತ್ತು ಅದರ ಪ್ರಕಾರ ನಡೆದುಕೊಳ್ಳಬೇಕು. ಕೆಲವರು ಸಂದೇಹಗಳಿಂದ ಕಷ್ಟಪಡುತ್ತಾ ಇದ್ದಾರೆ ಮತ್ತು ನಂಬಲು ಬಯಸುತ್ತಾರೆ. ಇತರರು ಘೋರವಾದ ಅಪಾಯದಲ್ಲಿದ್ದಾರೆ ಮತ್ತು ಅವರನ್ನು ಕಾಪಾಡಲು ತ್ವರಿತವಾಗಿ ಕ್ರಿಯೆಯನ್ನು ಮಾಡಬೇಕಾಗಿದೆ. ಅವರು ದೇವರ ನ್ಯಾಯತೀರ್ಪಿನ ಬೆಂಕಿಯನ್ನು ಎದುರಿಸುವ ಅಪಾಯದಲ್ಲಿದ್ದಾರೆ. ಇತರರ ವಿಷಯದಲ್ಲಿಯೂ ನಾವು ಭಯಪಡುವವರಾಗಿರಬೇಕು ಇಲ್ಲವಾದರೆ ಅವರ ಪಾಪಗಳಿಗೆ ಒಳಗಾಗುತ್ತೇವೆ (ಗಲಾ 6:1 ರೊಂದಿಗೆ ಹೋಲಿಸಿ ನೋಡಿರಿ).

ನಾವು ಪಾಪಿಯನ್ನು ಪ್ರೀತಿಸಬೇಕು ಆದರೆ ಪಾಪವನ್ನು ದ್ವೇಷಿಸಬೇಕು. **24-25**

**1:24-25** ಸತ್ಯವೇದದಲ್ಲಿರುವ ಪ್ರಸಿದ್ಧ ಡಾಕ್ಸಾಲಜಿಗಳಲ್ಲಿ ಇದೂ ಒಂದಾಗಿದೆ. **24**

**1:24** “*ಎಡವಿಬೀಳದಂತೆ ಕಾಪಾಡುವದು*”– ದೇವರು ನಮ್ಮನ್ನು ಕಾಪಾಡಲು ಶಕ್ತನಾಗಿದ್ದಾನೆ – ಕೀರ್ತನೆ 37:23-24; ರೋಮಾ 8:37.

“*ನಿರ್ದೋಷಿಗಳಾಗಿ ನಿಲ್ಲಿಸಲು*”– ಎಫೆ 1:4; 5:26-27.

“*ಹರ್ಷದೊಡನೆ*”– ಅನೇಕ ವಿಫಲತೆಗಳ ವಿಷಯದಲ್ಲಿ ದುಃಖಿಸುವ ಬದಲು ಹರ್ಷಪಡುವಂತೆ ಮಾಡುತ್ತಾನೆ. **25**

**1:25** “*ಆತನು ಮಾತ್ರವೇ ಜ್ಞಾನಿ*”– ರೋಮಾ 11:36; 16:27.